**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 04-12-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂಎನ್ ಎಂ ವಕೀಲರವರಿಂದಃ -**

ಹರ್ಷ ಎಂಬುವವರು ನನ್ನ ತಂಗಿ ಗೀತಾ ರವರ ಮಗ ಎಂದರೆ ಸರಿ. ಸದರಿಯವರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಸದರಿ ಹರ್ಷ ರವರು ಆರೋಪಿಯ ತಾಯಿ ಸುಜಾತ ರವರ ವಿರುದ್ದ ಬೆಂಗಳೂರಿನ 23 ಎಸಿಜೆ ನ್ಯಾಯಾಲಯದಲ್ಲಿ ಸಿಸಿ ನಂ.11667/23 ರಂತೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ತಾಯಿಯು ನನ್ನತಂಗಿ ಗೀತಾ ರವರ ಬಳಿ ಚೀಟಿ ಹಾಕಿದ್ದು, ಚೀಟಿಯ ಭದ್ರತೆಗಾಗಿ ಆರೋಪಿಯ ಚೆಕ್ ಮತ್ತು ಆಕೆಯ ಚೆಕ್ ನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಚೀಟಿ ಮುಗಿದ ನಂತರ ಸದರಿ ನನ್ನ ತಂಗಿ ಗೀತಾ ಚೆಕ್ ನ್ನು ಹಿಂದಿರುಗಿಸದೇ ನನ್ನ ಮತ್ತು ಅವರ ಮಗ ಹರ್ಷ ರವರ ಮೂಲಕ ಆರೋಪಿ ಮತ್ತು ಅವರ ತಾಯಿಯ ವಿರುದ್ದ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸದರಿ ಹರ್ಷ ರವರು ದಾಖಲಿಸಿರುವ ಪ್ರಕರಣ ನನಗೆ ಗೊತ್ತಿಲ್ಲ, ಆದರೆ ನನಗೆ ಆರೋಪಿ ಮತ್ತು ಅವರ ತಾಯಿ ನೀಡಿದ್ದಾರೆ ಎನ್ನುತ್ತಾರೆ. ಆರೋಪಿ ಮತ್ತು ಅವರ ತಾಯಿ ನನಗೆ ಖುದ್ದು ಪರಿಚಯವಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮೊದಲ ಬಾರಿಗೆ ನನ್ನನ್ನು ನ್ಯಾಯಾಲಯದಲ್ಲಿ ನೋಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಂಗಿಯ ಮನೆಯಲ್ಲಿ ನೋಡಿದ್ದಾರೆ ಎನ್ನುತ್ತಾರೆ. ನಿಪಿ-1 ರಲ್ಲಿ ಒಕ್ಕಣೆಯಲ್ಲಿನ ಇಂಕು ಮತ್ತು ಸಹಿಯಲ್ಲಿನ ಇಂಕು ವ್ಯತ್ಯಾಸ ಆಗಿದೆ ಎಂದರೆ ಸಾಕ್ಷಿ ನನ್ನ ಮುಂದೆ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ನನ್ನ ತಂಗಿಗೆ ಸಹಾಯವಾಗಲಿ ಎಂದು ಆರೋಪಿಯಿಂದ ಅಕ್ರಮ ಲಾಭ ಮಾಡಬೇಕೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು